


ಗುಂಡ: ನಮಸ್ಕಾರ ಸಾರ್! ನಿಮ್ಮ ಮನೆಯಲ್ಲಿ ಕರಾಟೆ ಮತ್ತು ಕುಂಗ್ ಫೂ ಶಿಕ್ಷಣವನ್ನು ಹೇಳಿ ಕೊಡಲಾಗುವುದು ಎಂದು ಬೋರ್ಡು ಹಾಕಿದ್ದೀರಲ್ಲ. ಅದಕ್ಕೆ ಫೀಸು ಎಷ್ಟು?

ಮನೆ ಮಾಲೀಕ: ಅಯ್ಯೋ ಇಲ್ಲಿ ಆ ತರಹದ ಯಾವ ವಿದ್ಯೆಯನ್ನೂ ಹೇಳಿ ಕೊಡುವುದಿಲ್ಲ. ಕಳ್ಳಕಾಕರು, ದರೋಡೆಕೋರರು ಈ ಮನೆಯತ್ತ ಸುಳಿಯದಿರಲಿ ಅಂತ ಬೋರ್ಡು ಹಾಕಿಸಿದ್ದೇನೆ ಅಷ್ಟೆ!

★ ★ ★

ಗೆಳೆಯ: ಯಾಕೋ ಗುಂಡ ಮೊದಲಿದ್ದ ಕೆಲಸ ಬಿಟ್ಟೆಯಂತೆ?

ಗುಂಡ: ಯಜಮಾನರು ನಾನು 100 ರೂ. ಕದ್ದೆ ಅಂತ ಅಂದ್ರು. ಅದಕ್ಕೆ.

ಗೆಳೆಯ: ಸಾಕ್ಷಿ, ತೋರಿಸಿ ಅಂತ ಹೇಳಬೇಕಿತ್ತು.

ಗುಂಡ: ಹಾಗೇ ಹೇಳಿದೆ. ಅವರು ತೋರಿಸಿಯೇ ಬಿಟ್ಟರು.

★ ★ ★

ಆಫೀಸರ್: ಏನ್ರೀ ಗುಂಡಣ್ಣ ಚಳಿಗಾಲದ ಒಳ ಉಡುಪನ್ನು ಧರಿಸಿ ಬಂದಿದ್ದೀರಿ.

ಗುಂಡ: ನಿಮ್ಮ ಬುದ್ಧಿವಂತಿಕೆಯ ಯೋಚನಾಶಕ್ತಿಗೆ ಅಭಿನಂದನೆಗಳು ಸಾರ್. ಆದರೆ ಅದನ್ನು ಹೇಗೆ ಕಂಡು ಹಿಡಿದಿರಿ?

ಆಫೀಸರ್: ತುಂಬಾ ಸುಲಭವಾಗಿ ಕಂಡು ಹಿಡಿದೆ. ನೀವು ಪ್ಯಾಂಟ್ ಹಾಕಿಕೊಳ್ಳದೆ ಬಂದಿದ್ದೀರಲ್ಲ.

★ ★ ★

ಗುಂಡ: ನೀನು ಇದನ್ನು ಕೇಸರಿಭಾತ್ ಅಂದರೆ ನಂಬಲು ನನ್ನನ್ನೇನು ಮುತ್ಠಾಳ ಅಂದು ಕೊಂಡು ಬಿಟ್ಟೆಯಾ?

ಮಾಣಿ: ನನ್ನಾಣೆಗೂ ಅದು ಕೇಸರಿ ಭಾತೇ ಸಾರ್.

★ ★ ★

ಗೆಳೆಯ: ಕೊಲೆಗಾರನೊಬ್ಬನಿಗೆ ನ್ಯಾಯಾಧೀಶರು 99 ವರ್ಷ ಜೈಲು ಶಿಕ್ಷೆ ವಿಧಿಸಿದ್ದಾರೆ.

ಗುಂಡ: ಸದ್ಯ ಮರಣದಂಡನೆ ವಿಧಿಸಲಿಲ್ಲವಲ್ಲ.

★ ★ ★

ವೈದ್ಯ: ಒಂದು ಬಾಟಲಿ ತುಂಬ ನಾನು ನಿಮಗೆ ಕೊಟ್ಟಿದ್ದ ಶಕ್ತಿವರ್ಧಕ ಗುಳಿಗೆಗಳನ್ನು ಸೇವಿಸುತ್ತಿದ್ದೀರಿ ತಾನೆ?

ಗುಂಡ: ನನಗಿನ್ನೂ ಆ ಬಾಟಲಿಯ ಮುಚ್ಚಳವನ್ನೇ ತೆಗೆಯುವುದಕ್ಕೆ ಆಗಿಲ್ಲ ಡಾಕ್ಟ್ರೇ.

★ ★ ★

ಗೆಳೆಯ: ನಮ್ಮಪ್ಪ ನಿನ್ನೆ ರಾತ್ರಿ ಒಂದು ಭಯಂಕರ ದೆವ್ವವನ್ನು ನೋಡಿದರಂತೆ. ಆದರೂ ಅವರ  ಒಂದೇ ಒಂದು ತಲೆಗೂದಲು ನೆಟ್ಟಗಾಗಿಲ್ಲವಂತೆ.

ಗುಂಡ: ಕೂದಲಿದ್ದರೆ ತಾನೇ ನೆಟ್ಟಗಾಗೋದು?

★ ★ ★

ಗುಂಡ: ಪಾಪ ನಮ್ಮಮ್ಮನಿಗೆ ಸಿಕ್ಕಾಪಟ್ಟೆ ನರದೌರ್ಬಲ್ಯ ಇದೆ.

ಗೆಳೆಯ: ಅಯ್ಯೋ ಪಾಪ, ಹೌದಾ?

ಗುಂಡ: ಹೌದು! ಅದಕ್ಕೆ ಅವರು ನಿನ್ನೆ ನನ್ನ ಮಾರ್ಕ್ಸ್ ಕಾರ್ಡ್ ನೋಡುತ್ತಿದ್ದ ಹಾಗೆಯೇ ಮೂರ್ಛೆ ಹೋಗಿಬಿಟ್ಟರು.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**




ಕುಡುಕನೊಬ್ಬ ಹೆಂಡತಿಯ ಜೊತೆ ಮಾತನಾಡುತ್ತಾ....

'ನನಗೆ ನಗರ ಸೇವಕ ಮಾಡಿದರೆ ರಸ್ತೆ ಬದಲಿಸುವೆ. ಪ್ರಧಾನಿ ಮಾಡಿದರೆ ದೇಶ ಬದಲಿಸುವೆ' ಅಂದ.

ಹೆಂಡತಿ: ಕೋಪದಿಂದ ಹೇಳಿದಳು. ಲುಂಗಿ ಅಂತ ತಿಳಿದು ನನ್ನ ಲಂಗ ಹಾಕಿದೀಯಾ ಮೊದಲು ಅದನ್ನು ಬದಲಿಸು. ಕುಡಿಯುವುದನ್ನು ಕಡಿಮೆ ಮಾಡು...

★ ★ ★

ಭಕ್ತ: ಸ್ವಾಮಿ, ನೀವು ಸನ್ಯಾಸಿಯಾಗಿ ಹೇಗೆ ಬದಲಾದಿರಿ?

ಸನ್ಯಾಸಿ: ಸೀರೆ ಅಂಗಡಿಯಲ್ಲಿ ಕೆಲಸ ಮಾಡುವಾಗ ಅಲ್ಲಿ ಹೆಂಗಸರು ಮಾತನಾಡುವ ಎರಡೇ ಎರಡು ಮಾತಿಗೆ ಸನ್ಯಾಸಿಯಾದೆ.

ಭಕ್ತ: ಏನದು, ಎರಡು ಮಾತು?

ಸನ್ಯಾಸಿ: ಈ ಡಿಸೈನ್‌ನಲ್ಲಿ ಬೇರೆ ಕಲರ್ ತೋರಿಸು. ಈ ಕಲರ್‌ನಲ್ಲಿ ಬೇರೆ ಡಿಸೈನ್ ತೋರಿಸು...

★ ★ ★

ಜಡ್ಜ್: ನಿಮ್ಮ ಗಂಡನಿಗೆ ಕುರ್ಚಿಯಲ್ಲಿ ಯಾಕೆ ಹೊಡೆದ್ರಿ?

ಪತ್ನಿ: ಯಾಕಂದ್ರೆ ಟೇಬಲ್ ತುಂಬಾ ಭಾರ ಇತ್ತು. ಎತ್ಲಿಕ್ಕೆ ಆಗಿಲ್ಲ.

★ ★ ★

ನಂಜ: ನಾನು ಆಗಲೇ ಕಾಲ್ ಮಾಡಿದ್ದೆ! ನೀನು ಅದ್ಯಾವ್ದೊ ಬೇರೆ ಕೆರೆಗೆ ನೀರು ತರಕ್ ಹೋಗಿದ್ದೀಯ ಅಂದ್ರು...!

ನೀರಜ್: ಲೇ... ಅದು 'ಬೇರೆ ಕರೆಯಲ್ಲಿ ನಿರತರಾಗಿದ್ದಾರೆ' ಅಂತ ಅಂದಿದ್ದು ಕಣಲೇ!

★ ★ ★

ರಾತ್ರಿ ಬಾದಾಮಿ ನೆನೆಸಿ ಇಟ್ಟಿದ್ದೆ. ಬೆಳಿಗ್ಗೆ ತಿಂದ್ರೆ ನೆನಪಿನ ಶಕ್ತಿ ಜಾಸ್ತಿ ಆಗುತ್ತೆ ಅಂತ. ಬೆಳಿಗ್ಗೆ ಎದ್ದ ಮೇಲೆ ಎಲ್ಲಿ ನೆನೆಸಿ ಇಟ್ಟಿದ್ದೆ ಅಂತಾನೇ ನೆನಪಾಗ್ತಿಲ್ಲ!

**(ಸಂಗ್ರಹ) ವಿ. ಹೇಮಂತಕುಮಾರ, ಬೆಂಗಳೂರು**